ಶ್ರೀ ಟಿ. ಆರ್. ಶಾಮಣ್ಣ .—ಈಗ ತಾವು ಉತ್ತರದಲ್ಲಿ overall shortage of fertilisers ಬಗ್ಗೆ ಹೇಳಿದ್ದೀರಿ. ರಾಸಾಯನಿಕ ಗೊಬ್ಬರ ಸಿಕ್ಕುವುದಕ್ಕೆ ಹೆಚ್ಚು ತೊಡಕುಗಳು ಇರುವುದರಿಂದ ನಮ್ಮ ರಾಜ್ಯದಲ್ಲಿರತಕ್ಕ ಬೆಳಗೊಳ ರಾಸಾಯನಿಕ ಗೊಬ್ಬರದ ಕಾರ್ಖಾನೆ ಸರ್ಕಾರ ತೆಗೆದುಕೊಂಡು ಉತ್ಪನ್ನ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎನ್. ಚಿಕ್ಕೇಗೌಡ .—ಬೆಳಗೊಳದ ರಾಸಾಯನಿಕ ಗೊಬ್ಬರದ ಕಾರ್ಖಾನೆ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಈಗಾಗಲೇ ಪರಿಶೀಲಿಸುತ್ತಿದೆ. ಆದರಲ್ಲಿ ಆಗಿರತಕ್ಕ ಲಾಸ್‌ನ್ನು ಸರ್ಕಾರ ಗಮನದಲ್ಲಿಟ್ಟು ಕೊಂಡು, ಹೈಕೋರ್ಟ್ ಮುಂದೆ ಲಿಕ್ವಿಡೇಷನ್ ಪ್ರೊಸೀಡಿಂಗ್ಸ್ ಇರುವುದರಿಂದ ಇದರ ಬಗ್ಗೆ ವ್ಯವಹಾರ ನಡೆಸುತ್ತಿದ್ದೇವೆ.

ಶ್ರೀ ಪಿ ಎಂ. ಬಾಂಗಿ .—ಜಮಖಂಡಿ, ಮುದೋಳ ಮತ್ತು ಬೀಳಗಿ ಈ ಮೂರು ತಾಲ್ಲೂಕುಗಳಲ್ಲಿ ಫರ್ಟಿಲೈಸರ್ಸ್ ವಿತರಣೆ ಬಗ್ಗೆ ಕಾರ್ಡುಗಳು ಹಂಚಿಲ್ಲ, ಅಲ್ಲಿ ಕೂಡಲೇ ಕಾರ್ಡುಗಳನ್ನು ಹಂಚಿ ಫರ್ಟಿಲೈಸರ್ ವಿತರಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ .—ಈಗಾಗಲೇ ರಾಜ್ಯದಲ್ಲಿ ಸರ್ಕಾರ ಕಾರ್ಡುಗಳ ಮೂಲಕ ಗೊಬ್ಬರ ವಿತರಣೆ ಮಾಡಬೇಕು ಎಂದು ಆದೇಶ ಕೊಟ್ಟಿದೆ. ಶೇಕಡ ೮೦ ರಷ್ಟು ಕಾರ್ಡುಗಳನ್ನು ವಿತರಣೆ ಮಾಡಿದ್ದೇವೆ. ಉಳಿದ ೨೦ ಪರ್ಸೆಂಟ್ ಕಾರ್ಡುಗಳನ್ನು ಸ್ಪೆಷಲ್ ಡ್ರೈವ್ ಮೂಲಕ ಈ ತಿಂಗಳೊಳಗಾಗಿ ಹಂಚಲು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಮತ್ತು ವ್ಯವಸಾಯ ಇಲಾಖೆಗೆ ಆದೇಶ ಕೊಟ್ಟಿದೆ.

* *Prevention of Smuggling of Fertilisers.*

26. SRI K. H. HANUME GOWDA (Hassan) .—Will the Minister for Agriculture and Animal Husbandry be pleased to state :—

(*a*) whether it is a fact that during the last week of December 1973 the Central Excise squad seized a lorry smuggling 75 bags of Urea and 7 bags of Ammonia Sulphate fertilsers at Hassan from South Kanara to Mandya *via* Hassan ;

(*b*) whether it is a fact that this case has been entrusted to Hassan Police for further action in this behalf ;

(*c*) if so, the stage at which that this case stands ;

(*d*) the names of lorry owner and others involved in this irregular transaction ;

(*e*) the action taken by the Government to prevent such irregular transaction ?

SRI N. CHIKKE GOWDA .—(Minister for Agriculture and Animal Husbandry) .—

(*a*) Yes.

(*b*) Yes.

(*c*) It is under Police investigation.

(*d*) The Name of the Lorry owner is Sri K. Viswanathaprabhu s/o K. Dasaprabhu *alias* Narasimhaprabhu, Moodabidare, South Kanara District and Sri Ramachandra s/o Kuragappa is the name of the Driver resident of Puttur c/o Viswanath Prubhu, Lorry Owner.

(SRI N. CHIKKE GOWDA)

(e) Suitable action is being taken in exercise of the powers of conferred under Fertiliser Control Order, as amended by Govenment Order No. AF 70 AFT 72 dated 16-8-1973 against the Manufacturers, dealers and distributors to prevent the irregular transactions.

ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ದಕ್ಷಿಣಕನ್ನಡ ಮತ್ತು ಹಾಸನ ಜಿಲ್ಲೆಯಿಂದ ರಾಸಾಯನಿಕ ಗೊಬ್ಬರ ಯಥೇಚ್ಚವಾಗಿ ಮಂಡ್ಯ ಜಿಲ್ಲೆ ಕಡೆಗೆ ಕಳ್ಳಸಾಗಾಣಿಕೆಯಲ್ಲಿ ಹೋಗುತ್ತಿದೆ ಎಂದು ಪೋಲೀಸಿನವರಿಗೆ ತಿಳಿಸಿದರೆ, ಅವರು ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಯಾವ ಹಂತದಲ್ಲಿ ಪೋಲೀಸಿನವರು ಈ ತರಹ ಅಕ್ರಮ ರಾಸಾಯನಿಕ ಗೊಬ್ಬರ ಸಾಗಿಸುವ ಲಾರಿಗಳನ್ನು ಹಿಡಿಯಬಹುದು ?

† ಶ್ರೀ ಎನ್. ಚಿಕ್ಕೇಗೌಡ.— ಫರ್ಟಿಲೈಸರ ಕಂಟ್ರೋಲ್ ಆರ್ಡರ್ ಪ್ರಕಾರ ಎಲ್ಲೇ ಆಗಲೀ ಗೊಬ್ಬರವನ್ನು ರಹದಾರಿ ಅಥವಾ ಅಧಿಕೃತ ದಾಖಲೆ ಇಲ್ಲದೆ ಸಾಗಾಣಿಕೆ ಮಾಡಿದರೆ, ಅವರ ಮೇಲೆ ಎಸ್ಸೆನ್ಷಿಯಲ್ ಕಮಡಿಟೀಸ್ ಆಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳಬಹುದು. ಅಂತರ ಜಿಲ್ಲಾ ಸಾಗಾಣಿಕೆ ನಿರ್ಬಂಧ ಗೊಳಿಸಲಾಗಿದೆ. ರೈತರು ರಹದಾರಿ ಇಲ್ಲದೇ ಸಾಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಾನೂನಿನಲ್ಲಿ ಅಳವಡಿಸಲಾಗಿದೆ.

ಶ್ರೀ ಕೆ ಹೆಚ್. ಹನುಮೇಗೌಡ.— ಲಾರಿಯಲ್ಲಿ ರಾಸಾಯನಿಕ ಗೊಬ್ಬರವನ್ನು ಕಳ್ಳಸಾಗಾಣಿ ಕೆಯಿಂದ ಸಾಗಿಸುವಾಗ ಪೋಲೀಸರು ಲಾರಿಯನ್ನು ಹಿಡಿದು ಬಿಟ್ಟರೆ, ಲಾರಿ ಮಾಲಿಕರು ನಮಗೆ ಆ ವಿಚಾರ ಗೊತ್ತಿಲ್ಲ ಎಂದು ಸ್ಟೇಟ್‌ಮೆಂಟ್ ಕೊಟ್ಟು ಈ ತರಹ ತಪ್ಪಿಸಿ ಕೊಳ್ಳುತ್ತಾರೆ, ಲಾರಿ ಓನರ್ಸ್ ಜವಾಬ್ದಾರಿ ಬರುವುದಿಲ್ಲ, ಪೋಲೀಸರು ಬರೀ ಗೊಬ್ಬರ ಮಾತ್ರ ಕನ್‌ಫಿಸಿಕೇಟ್ ಮಾಡಿಕೊತ್ತಾರೆ ಲಕ್ಷಾಂತರ ರೂಪಾಯಿ ದುಡಿಯುವ ವರ್ತಕರು ಹೋದರೆ ಹೋಗಲಿ ಎಂದು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ, ಲಾರಿ ಓನರ್ಸ್ ಇನ್‌ವಾಲ್ವ್ ಮಾಡಿ ಲಾರಿ ಕಾನ್‌ಫಿಸ್ಕೇಟ್ ಮಾಡಿಕೊಳ್ಳುವುದಕ್ಕೆ ಏನಾದರೂ ಕಾನೂನು ತರುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎನ್. ಚಿಕ್ಕೇಗೌಡ.— ಸರ್ವೇಸಾಧಾರಣವಾಗಿ ವಾಹನದಲ್ಲಿ ಇರತಕ್ಕ ಡ್ರೈವರ್ಸ್ ಮತ್ತು ಕ್ಲೀನರ್ಸ್ ಆ ರೀತಿ ಹೇಳುವುದು ಸ್ವಾಭಾವಿಕ. ಸರ್ಕಾರದವರು ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎ.ಬಿ ರಾಮಸ್ವಾಮಿ— ಫರ್ಟಿಲೈಸರ್ಸ್ ಸೀಸ್ ಮಾಡಿದ ಮೇಲೆ ಅದನ್ನು ಕಾನ್‌ಫಿಸ್ಕೇಟ್ ಮಾಡಿ ಕ್ರಮ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಪೋಲೀಸರು ಮಾಲು ಸೀಸ್ ಮಾಡಿ ಕೇಸ್ ರಿಜಿಸ್ಟರ್ ಮಾಡುತ್ತಾರೆ. ಮುಂದಿನ ಕ್ರಮ ಕೋರ್ಟ್ ವ್ಯವಹಾರದಲ್ಲಿ ತೊಡಕಾಗತಕ್ಕದ್ದು.

ಶ್ರೀ ಕೆ. ಹೆಚ್ ಹನುಮೇಗೌಡ.— ಈ ರೀತಿ ರಾಸಾಯನಿಕ ಗೊಬ್ಬರ ಅಕ್ರಮ ಸಾಗಾಣಿಕೆ ಪೋಲೀಸರಿಗೆ ಸಿಕ್ಕಿದರೆ ಕೇಸ್ ಹಾಕುತ್ತಾರೆ. ಅಗ್ರಿಕಲ್ಚರ್ ಇಲಾಖೆ ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳಬಹುದು. ?

ಶ್ರೀ ಎನ್. ಚಿಕ್ಕೇಗೌಡ.— ಜಿಲ್ಲೆಯಲ್ಲಿರತಕ್ಕ ಪ್ರತಿ ಡೆಪ್ಯೂಟಿ ಡೈರೆಕ್ಟರ್, ಸಬ್‌ಡಿವಿಜನ್ ಆಫೀಸ್ಟೆಂಟ್ ಡೈರೆಕ್ಟರ್, ಜಿಲ್ಲಾ ಅಗ್ರಿಕಲ್ಚರ್ ಆಫೀಸರ್ ಮತ್ತು ಫರ್ಟಿಲೈಸರ್ಸ್ ಸಂಬಂಧಪಟ್ಟ ಅಧಿಕಾರಿಗಳು, ಪೋಲೀಸರು ತೆಗೆದುಕೊಳ್ಳವ ರೀತಿಯಲ್ಲಿ ಕ್ರಮ ತೆಗೆದುಕೊಂಡು ಅವರಿಗೆ ಹಾಂಡ್ ಪವರ್ ಮಾಡುವ ಅಧಿಕಾರಿ ಕೊಟ್ಟಿದ್ದೇವೆ.

* *Sale of Chemical Fertilisers to Agriculturists at enhanced rates*